# ಸುಂದರಿಯರ ಜನುಮ ದಿನ!





ಮಂಗಳೂರಿನಿಂದ ಬಾಲಿವುಡ್‌ಗೆ ಜಿಗಿದ ಸುಂದರಿಯರಲ್ಲಿ ಇತ್ತೀಚೆಗೆ ಹೆಚ್ಚು ಸುದ್ದಿ ಮಾಡುತ್ತಿರುವವಳು ಜೆನೆಲಿಯಾ ಡಿಸೋಜಾ. ಮೀಡಿಯಾದಲ್ಲಿ ಮಿಂಚುವಲ್ಲಿ ಕರಾವಳಿಯ ಐಶ್ವರ್ಯ ರೈ ಮತ್ತು ಶಿಲ್ಪಾ ಶೆಟ್ಟಿಯ ಹಾದಿ ಯಲ್ಲೇ ಹೆಜ್ಜೆ ಹಾಕಿರುವ ಜೆನೆಲಿಯಾ ತನ್ನ ಭಾವಪೂರ್ಣ ಕಂಗಳು ಹಾಗೂ ಮಿಂಚುಳ್ಳಿ ನಗುವಿನಿಂದಲೇ ಅಭಿಮಾನಿಗಳನ್ನು ಬೌಲ್ಡ್ ಮಾಡಿದ್ದಾಳೆ. 'ಜಾನೆ ತೂ ಯ ಜಾನೇ ನ' ಎಂಬ ಒಂದೇ ಒಂದು ಚಿತ್ರ ಬಾಲಿವುಡ್‌ನಲ್ಲಿ ಆಕೆಯ ಜನ ಪ್ರಿಯತೆಯ ಮೀಟರನ್ನು ತುತ್ತ ತುದಿಗೆ ಒಯ್ದದ್ದು ಸುಳ್ಳಲ್ಲ. ಹಿಂದಿ ಮಾತ್ರವಲ್ಲ, ತೆಲುಗು, ತಮಿಳು, ಮಲಯಾಳಂ ಚಿತ್ರರಂಗದಲ್ಲೂ ಮಿಂಚುತ್ತಿರುವ ಜೆನೆಲಿಯಾ ಕಳೆದ ವಾರ ತನ್ನ 29ನೇ ಹುಟ್ಟುಹಬ್ಬ (ಆಗಸ್ಟ್ 5) ಆಚರಿಸಿದಳು.

'ಹುಟ್ಟುಹಬ್ಬದ ಆಚರಣೆ ಎಂದರೆ ವಿಶೇಷವೇನಿಲ್ಲ. ಹಿಂದಿನ ರಾತ್ರಿ ಪೋಷಕರ ಜತೆ ಕುಳಿತು ಮಾತನಾಡುತ್ತಾ ಊಟ ಮಾಡಿದೆ. ಬೆಳಿಗ್ಗೆ ಬೇಗ ಎದ್ದು ಚರ್ಚ್‌ಗೆ ಹೋದೆ. ಗೆಳೆಯ–ಗೆಳತಿಯರು ಸಂಬಂಧಿಕರು ವಿಶ್ ಮಾಡಿದರು. ಎಲ್ಲಕ್ಕಿಂತ ಹೆಚ್ಚಾಗಿ ಟ್ವಿಟರ್‌ನಲ್ಲಿ ನೂರಾರು ಅಭಿಮಾನಿಗಳ ಜತೆಗೆ ಹರಟೆ ಹೊಡೆದೆ' ಎಂದಿದ್ದಾಳೆ ಈ ಚೆಲುವೆ. ಯುಟಿವಿ ಯ ಬಿಗ್ ಸ್ವಿಚ್ ಕಾರ್ಯಕ್ರಮದಿಂದ ಕಳಚಿ ಕೊಂಡಿರುವ ಜೆನೀಗೆ ಇತ್ತೀಚೆಗಷ್ಟೆ 'ವರ್ಷದ ಬ್ರಾಂಡ್ ಅಂಬಾಸಿಡರ್' ಎಂಬ ಪ್ರಶಸ್ತಿಯನ್ನು ಸಿಎನ್‌ಬಿಸಿ ಚಾನೆಲ್ ನೀಡಿದ್ದೂ ಸುದ್ದಿಯಾಯಿತು. ಸದ್ಯಕ್ಕಂತೂ ಜೆನೀ ಸಿನಿಮಾದಲ್ಲೇ ಬ್ಯುಸಿ. ಹಾಗಾಗಿ ಜಾಹೀರಾತು ಸೈಡ್ ಬಿಸಿನೆಸ್ ಆಗಿದೆಯಂತೆ!

ಅದೇ ದಿನ ಹುಟ್ಟುಹಬ್ಬ ಆಚರಿಸಿದ ಇನ್ನೊಬ್ಬಾಕೆ ಕೃಷ್ಣಸುಂದರಿ ಕಾಜೋಲ್. ದಶಕದ ಹಿಂದೆ ಬಾಲಿವುಡ್‌ಗೆ ಎಂಟ್ರಿ ಕೊಟ್ಟಾಗ ಕಪ್ಪಗೆ, ತೆಳ್ಳಗೆ ಇದ್ದ ಕಾಜೋಲ್ ಈಗ 36ಕ್ಕೆ ತಲುಪಿದ್ದಾಳೆ. ಆದರೆ ನಟನೆ ಮತ್ತು ಗ್ಲಾಮರ್ ಎರಡೂ ದೃಷ್ಟಿಯಿಂದ ಇನ್ನಷ್ಟು ವರ್ಷಗಳ ಕಾಲ ಹೀರೋಯಿನ್ ಆಗಿಯೇ ಉಳಿಯುವ ಸೂಚನೆ ನೀಡಿದ್ದಾಳೆ. ನಟನೆಯಲ್ಲಿ ಪ್ರೀತಿ, ರಾಣಿ ಮುಂತಾದ ಸರೀಕರಿಗೆ ಸರಿಯಾದ ಪೈಪೋಟಿ ನೀಡಿದ ಕಾಜೋಲ್, ಗಂಡ ಅಜಯ್‌ನನ್ನೂ, ಮಕ್ಕಳನ್ನೂ ಸಂಭಾಳಿಸಿಕೊಂಡು ಬಾಲಿವುಡ್‌ನ ಕೀರ್ತಿ ಶಿಖರದಲ್ಲಿ ಈಗಲೂ ರಾಣಿಯಂತೆ ಕುಳಿತಿರುವುದು ಅಚ್ಚರಿಯ ಸಂಗತಿಯೇ.

■ ಬಿಂದು

Pure Kanchee Wedding Sarees Collections

samyakk™
eternally graceful

A unit of Mahaveer Salection
'D' Souza Circle, Richmond Road
Opp. Lifestyle, Bangalore - 560 025
Ph. : 080 41113330/41227442
Web. : www.samyakk.com

Sarees-Ghagras-Kanjivaram-Salwar Suits

Nakshatra

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65